ಅಸಲು ದಾವಾ.ನಂ. 323/2023
ಪಿ ಡಬ್ಲ್ಯೂ-1

ದಿನಾಂಕಃ 15-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎಸ್.ಎ.ಎಸ್. ವಕೀಲರಿಂದ:</u>

ನಾನು 8 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಆಸ್ತಿಗಳಲ್ಲಿ ಪಾಲು ಕೊಡುವಂತೆ ಈ ದಾವೆಯನ್ನು ಸಲ್ಲಿಸಿರುತ್ತೇನೆ. ನಾನು ದಾವೆಯಲ್ಲಿ ತೋರಿಸಿದ ನಮ್ಮ ಕುಟುಂಬದ ವಂಶಾವಳಿ ಬಗ್ಗೆ ನೋಡಿದರೆ ಹೇಳುತ್ತೇನೆ. ನಮ್ಮ ಮನೆತನದ ಮೂಲ ಪುರುಷ ರಾಮಪ್ಪ ಎಂದು ಹೇಳಿರುತ್ತೇನೆ. ನಮ್ಮ ಮನೆತನದ ಮೂಲ ಪುರುಷ ಚನ್ನಮಲ್ಲಪ್ಪ ಎಂದು ವಂಶಾವಳಿಯಲ್ಲಿ ತೋರಿಸಿರುವುದು ಗೊತ್ತು. ನನ್ನ ಅಜ್ಜ ಚನ್ನಮಲ್ಲಪ್ಪ ಇವರಿಗೆ ಒಟ್ಟು ನಾಲ್ಕು ಜನ ಮಕ್ಕಳು, ಅವರ ಹೆಸರು ನನಗೆ ನೆನಪಿಲ್ಲ. ನನ್ನ ಅಜ್ಜನ ನಾಲ್ಕು ಜನ ಮಕ್ಕಳು ಮೃತಪಟ್ಟಿರುತ್ತಾರೆ. ನನ್ನ ಅಜ್ಜನ ಮೊದಲನೆಯ ಮಗ ಯಾರು ಎಂದು ನನಗೆ ಗೊತ್ತಿಲ್ಲ. ನನ್ನ ಅಜ್ಜ ರಾಮಪ್ಪ ಇವರಿಗೆ ಒಟ್ಟು ಇಬ್ಬರು ಮಕ್ಕಳು. ಅವರೆಂದರೆ ಸಿದ್ದಮಲ್ಲಪ್ಪ ಮತ್ತು ಚನ್ನಮಲ್ಲಪ್ಪ. ಸದರಿ ಸಿದ್ದಮಲ್ಲಪ್ಪ ನಾಲ್ಕು ಜನ ಮಕ್ಕಳು, ಅವರೆಂದರೆ ಪರಪ್ಪ, ಗುರುಪಾದ, ಶ್ರೀಶೈಲ್ ಮತ್ತು ಬಾಲಚಂದ್ರ. ನನ್ನ ತಂದೆಗೆ ನಾವು ಇಬ್ಬರು ಮಕ್ಕಳು, ಅವರೆಂದರೆ ನಾನು ಮತ್ತು ಗಂಗಪ್ಪ.

ಸಿದ್ದಮಲ್ಲಪ್ಪನ ಮಗ ಪರಪ್ಪ ಮೃತಪಟ್ಟಿರುತ್ತಾನೆ. ಅವರ ಹೆಂಡತಿಯ ಹೆಸರು ಅಲ್ಲವ್ವ. ಸದರಿ ಪರಪ್ಪ ಮತ್ತು ಅಲ್ಲವ್ವ ಇವರಿಗೆ ಮೂರು ಜನ ಮಕ್ಕಳು, ಅವರೆಂದರೆ ರಾಮಪ್ಪ, ಶಿವಾನಂದ ಮತ್ತು ಇನ್ನೊಬ್ಬರ ಹೆಸರು ನೆನಪಿಲ್ಲ. ಸದರಿ ಪರಪ್ಪನ ಹೆಣ್ಣು ಮಗಳ ಹೆಸರು ಮಹಾದೇವಿ. ನನ್ನ ಅಜ್ಜನ ಸಹೋದರ ಬಸಪ್ಪ ಇದ್ದ, ಅವರು ಮತ್ತು ಅವರ ಹೆಂಡತಿ ಮೃತಪಟ್ಟಿರುತ್ತಾರೆ. ಸದರಿ ಬಸಪ್ಪ ಇವರಿಗೆ ಮೂರು ಜನ ಮಕ್ಕಳು. ಅವರೆಂದರೆ, ಶಿವಪುತ್ರಪ್ಪ, ಗುರುಲಿಂಗಪ್ಪ ಮತ್ತು ಚೆನ್ನಪ್ಪ. ಸದರಿಯವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ.

ದಾವಾ ಆಸ್ತಿಗಳು ನಮ್ಮ ಮನೆತನಕ್ಕೆ ನಮ್ಮ ಅಜ್ಜ ರಾಮಪ್ಪ ಇವರಿಂದ ಬಂದ ಆಸ್ತಿಗಳು. ನನ್ನ ಅಜ್ಜನಿಗೆ ಸುಮಾರು 8-10 ಜಮೀನುಗಳು ಇದ್ದವು, ಅವು ನನ್ನ ಅಜ್ಜ ಖರೀದಿಸಿದ ಆಸ್ತಿಗಳು. ನನ್ನ ಅಜ್ಜ ಸದರಿ ಆಸ್ತಿಗಳನ್ನು ಯಾರಿಂದ ಖರೀದಿ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಆ ಬಗ್ಗೆ ನನ್ನ ಮುಖ್ಯ ವಿಚಾರಣೆ ಮತ್ತು ವಾದ ಪತ್ರದಲ್ಲಿ ಬರೆದಿರುವುದು ನನಗೆ ಗೊತ್ತಿಲ್ಲ. ಪ್ರತಿವಾದಿಯರು ಸಲ್ಲಿಸಿದ ಪ್ರತಿವಾದ ಪತ್ರದ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ದಾವಾ ಆಸ್ತಿಗಳಲ್ಲಿ ವಿಭಾಗ

ಮಾಡಿಕೊಂಡಿರುವ ವಿಷಯ ನನಗೆ ಗೊತ್ತಿಲ್ಲ. ಪಾಲು ವಿಭಾಗದಲ್ಲಿ ನಮ್ಮ ಪಾಲಿಗೆ ಯಾವ ಆಸ್ತಿಗಳು ಬಂದಿದ್ದವು ಎಂದು ನನಗೆ ಗೊತ್ತಿಲ್ಲ. ಆ ಬಗ್ಗೆ ನನ್ನ ಸಹೋದರ ಗಂಗಪ್ಪ ಇವರಿಗೆ ಗೊತ್ತು. ಸದರಿ ಸಹೋದರ ಗಂಗಪ್ಪ ಸುಮಾರು 10-12 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ಈ ದಾವೆ ಸಲ್ಲಿಸಿದಾಗ ನನ್ನ ಸಹೋದರ ಜೀವಂತ ಇದ್ದ. ಈ ದಾವೆ ಸಲ್ಲಿಸುವಾಗ ದಾವಾ ಆಸ್ತಿಗಳ ಯಾವ ಮೂಲಕ ಬಂದಿರುತ್ತವೆ ಎಂದು ನನ್ನ ಸಹೋದರ ಗಂಗಪ್ಪ ಇವರನ್ನು ವಿಚಾರಣೆ ಮಾಡಿರುವುದಿಲ್ಲ.

ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ದಿನಾಂಕಃ 20-10-1959 ರಂದು, ಆಸ್ತಿಗಳನ್ನು ಪರಪ್ಪ ಚನ್ನಮಲ್ಲಪ್ಪ ಚಿಂಚಖಂಡಿ, ಚನ್ನಮಲ್ಲಪ್ಪ ರಾಮಪ್ಪ ಚಿಂಚಖಂಡಿ ಇವರ ಮಧ್ಯೆ ವಿಭಾಗವಾಗಿ ಎಂಆರ್ ನಂ.2063 ಮಂಜೂರಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಬ್ಯಾಂಕಿನ ಸೌಲಭ್ಯ ಪಡೆಯುವ ಸಲುವಾಗಿ ಪರಪ್ಪ ಮಾಡಿಕೊಂಡಿರಬಹುದು ಎಂದು ಹೇಳುತ್ತಾರೆ. ಸದರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ರ ದಾಖಲೆಯಾದ ನಂತರ, ಬ್ಯಾಂಕಿನಿಂದ ಪರಪ್ಪ ಒಬ್ಬರೆ ಆಸ್ತಿಗಳ ಮೇಲೆ ಸಾಲ ಪಡೆದಿರುತ್ತಾರೆ. ಸಾಕ್ಷಿ ಮುಂದುವರೆದು ಪರಪ್ಪ ಮತ್ತು ಚನ್ನಮಲ್ಲಪ್ಪ ಕೂಡಿಯೇ ಸಾಲ ತೆಗೆದಿರುವುದಾಗಿ ಹೇಳುತ್ತಾರೆ. ಪರಪ್ಪ ಮತ್ತು ಚನ್ನಮಲ್ಲಪ್ಪ ಎಷ್ಟು ಸಾಲ ಪಡೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿಯವರು ಯಾವ ಬ್ಯಾಂಕಿನಿಂದ ಸಾಲ ಪಡೆದಿರುತ್ತಾರೆ ಎಂದು ಗೊತ್ತಿಲ್ಲ. ನಿಡಿ-1 ರ ದಾಖಲೆ ಮಂಜೂರು ಮಾಡಿದ ಬಗ್ಗೆ ಮತ್ತು ಪರಪ್ಪ ಹಾಗೂ ಚನ್ನಮಲ್ಲಪ್ಪ ಬ್ಯಾಂಕಿನಿಂದ ಸಾಲ ಪಡೆದಿರುವ ಬಗ್ಗೆ ವಾದ ಪತ್ರ ಮತ್ತು ಸಾಕ್ಷಿಯಲ್ಲಿ ಹೇಳಿ ಬರೆಸಿರುವುದಿಲ್ಲ.

ನನ್ನ ತಂದೆ ಚನ್ನಮಲ್ಲಪ್ಪ ಮತ್ತು ಪರಪ್ಪ ಇವರಿಗೆ ಯಾವ ಆಸ್ತಿಗಳು ವಿಭಾಗದಲ್ಲಿ ಹೋಗಿದ್ದವು ಎಂದು ನನಗೆ ಗೊತ್ತಿಲ್ಲ. ನಿಡಿ-1 ರ ವಿಭಾಗದ ಪ್ರಕಾರ ನಾವಲಗಿ ಗ್ರಾಮದ ಸರ್ವೆ ನಂ.104/2, ಕ್ಷೇತ್ರ 5 ಎಕರೆ 3 ಗುಂಟೆ, ಸರ್ವೆ ನಂ.106/2, ಕ್ಷೇತ್ರ 5 ಎಕರೆ 20 ಗುಂಟೆ, ಸರ್ವೆ ನಂ.130/1 ಕ್ಷೇತ್ರ 13 ಎಕರೆ 29 ಗುಂಟೆ ಮತ್ತು ಸರ್ವೆ ನಂ.131/1 ಕ್ಷೇತ್ರ 14 ಎಕರೆ 11 ಗುಂಟೆ ನನ್ನ ತಂದೆಯ ಪಾಲಿಗೆ ಬಂದಿರುವ ವಿಷಯ ನನಗೆ ಗೊತ್ತಿಲ್ಲ. ನಿಡಿ-1 ರ ಪ್ರಕಾರ ಪರಪ್ಪ ತಂದೆ ಸಿದ್ದಮಲ್ಲಪ್ಪ ಇವರಿಗೆ ಜಮೀನು ಸರ್ವೆ ನಂ.103/1 ಕ್ಷೇತ್ರ 6 ಎಕರೆ 12 ಗುಂಟೆ, 105/2 ಕ್ಷೇತ್ರ 5 ಎಕರೆ 10 ಗುಂಟೆ, 107/1 ಕ್ಷೇತ್ರ

1 ಎಕರೆ 25 ಗುಂಟೆ, 107/2 ಕ್ಷೇತ್ರ 2 ಎಕರೆ 13 ಗುಂಟೆ, 130/2 ಕ್ಷೇತ್ರ 13 ಎಕರೆ 28 ಗುಂಟೆ, 131/2 ಕ್ಷೇತ್ರ 14 ಎಕರೆ 11 ಗುಂಟೆ ಬಂದಿದ್ದವು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಮತ್ತು ಪರಪ್ಪ ನಿಡಿ-1 ರಲ್ಲಿ ಹೇಳಿದಂದತೆ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಪ್ರಕಾರ ನನ್ನ ತಂದೆ ಮತ್ತು ಪರಪ್ಪ ಸಿದ್ದಮಲ್ಲಪ್ಪ ಇವರ ಮಧ್ಯೆ ಆಸ್ತಿಗಳಲ್ಲಿ ವಿಭಾಗ ಆಗಿರುವುದಿಲ್ಲ. ನಿಡಿ-1 ರ ಪ್ರಕಾರ ಪರಪ್ಪ ತಂದೆ ಸಿದ್ದಮಲ್ಲಪ್ಪ ಇವರ ಪಾಲಿಗೆ ಬಂದ ಆಸ್ತಿಗಳಲ್ಲಿ ಮಾತ್ರ ಪಾಲು ಕೋರಿ ಈ ದಾವೆ ಸಲ್ಲಿಸಿರುತ್ತೇನೆ, ನನ್ನ ತಂದೆಯ ಪಾಲಿಗೆ ಬಂದಿರುವ ಆಸ್ತಿಗಳನ್ನು ಸೇರಿಸಿರುವುದಿಲ್ಲ ಎಂದರೆ ಸಾಕ್ಷಿ ಯಾವುದೇ ಉತ್ತರ ನೀಡದೇ ಮೌನವಹಿಸಿರುತ್ತಾರೆ. ನನ್ನ ತಂದೆಯ ಹೆಸರಿನಲ್ಲಿ ನಿಡಿ-1 ರ ಪ್ರಕಾರ ಬಂದ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಯಾವುದೇ ಉತ್ತರ ನೀಡಿರುವುದಿಲ್ಲ. ನನ್ನ ತಂದೆಯ ಹೆಸರಿನಲ್ಲಿದ್ದ ಆಸ್ತಿಗಳನ್ನು ಯಾವ ಕಾರಣಕ್ಕಾಗಿ ದಾವೆಯಲ್ಲಿ ಸೇರಿಸಿಲ್ಲ ಎಂದು ಹೇಳಲು ಬರುವುದಿಲ್ಲ. ನನ್ನ ತಂದೆಯ ಹೆಸರಿನಲ್ಲಿದ್ದ ಆಸ್ತಿಗಳನ್ನು, ಅವರು ಮೃತಪಟ್ಟ ನಂತರ ನಾನು ಮತ್ತು ನನ್ನ ಸಹೋದರ ಗಂಗಪ್ಪ ವಾರಸಾ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ತಂದೆ ಸುಮಾರು 30-40 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ನಿಡಿ-1 ರ ಪ್ರಕಾರ ನನ್ನ ತಂದೆಯ ಹೆಸರಿನಲ್ಲಿ ವರ್ಗಾವಣೆಯಾದ ನಾಲ್ಕು ಆಸ್ತಿಗಳು ಅವರ ಹೆಸರಿನಲ್ಲಿಯೇ ಇರುತ್ತವೆ. ಸದರಿ ನಾಲ್ಕು ಆಸ್ತಿಗಳನ್ನು ಈ ಪ್ರಕರಣದಲ್ಲಿ ಸೇರಿಸಲು ಯಾವ ತೊಂದರೆ ಇತ್ತು ಎಂದರೆ ಸಾಕ್ಷಿ ನನ್ನ ಸಹೋದರನಿಗೆ ಗೊತ್ತು ಎಂದು ಹೇಳುತ್ತಾರೆ.

ನನ್ನ ತಂದೆಯ ಹೆಸರಿನಲ್ಲಿದ್ದ ಸದರಿ ಆಸ್ತಿಗಳನ್ನು ಪರಪ್ಪ ತಂದೆ ಸಿದ್ದಮಲ್ಲಪ್ಪ ಮಾರಾಟ ಮಾಡಿರುತ್ತಾರೆ. ಸದರಿ ಆಸ್ತಿಗಳನ್ನು ಶಿವಾಪೂರ ಕುಟುಂಬ ಮತ್ತು ಇತರರಿಗೆ ಮಾರಾಟ ಮಾಡಿರುತ್ತಾರೆ, ಅವರ ಹೆಸರು ಗೊತ್ತಿಲ್ಲ. ಸದರಿ ಆಸ್ತಿಗಳನ್ನು 30-40 ವರ್ಷಗಳ ಹಿಂದೆ ಮಾರಾಟ ಮಾಡಿರುತ್ತಾರೆ. ಖರೀದಿ ಪತ್ರಗಳಿಗೆ ಪರಪ್ಪ ಮತ್ತು ಅವರ ಸಹೋದರರು ಸಹಿ ಮಾಡಿರುವುದಿಲ್ಲ. ಸದರಿ ಆಸ್ತಿಗಳನ್ನು ಮಾರಾಟ ಮಾಡಿದಾಗ ನನ್ನ ತಂದೆ ಜೀವಂತ ಇದ್ದ. ಖರೀದಿ ಪತ್ರಗಳಿಗೆ ನಾನು ಮತ್ತು ನನ್ನ ಸಹೋದರ ಗಂಗಪ್ಪ ಸಹಿ ಮಾಡಿರುತ್ತೇವೆ. ಖರೀದಿ ಪತ್ರಗಳನ್ನು ಈ ದಾವೆಯಲ್ಲಿ ಹಾಜರಪಡಿಸಿರುವುದಿಲ್ಲ. ಸದರಿ ನಾಲ್ಕು ಆಸ್ತಿಗಳನ್ನು ಗುರುಪಾದಪ್ಪ ಹನಮಂತ ಶೇಗುಣಸಿ, ಹನಮಂತ ಗುರುಪಾದಪ್ಪ ಶೇಗುಣಸಿ, ಸದಪ್ಪ ಗುರುಪಾದಪ್ಪ ಶೇಗುಣಸಿ, ಪರಪ್ಪ ಮಲ್ಲಪ್ಪ ಶಿವಾಪೂರ, ಹನಮಂತ

ಭೀಮರಾಯಪ್ಪ ಸವದಿ, ರಾಮಪ್ಪ ಗೋವಿಂದಪ್ಪ ಪಾಟೀಲ ಮತ್ತು ಅಪ್ಪೋಜಪ್ಪ ತಂದೆ ಗುರಪ್ಪ ಕಂಠಿ ಇವರಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಆಸ್ತಿಗಳನ್ನು ಮಾರಾಟ ಮಾಡಿರುವುದು, ಈ ವಾದ ಪತ್ರದಲ್ಲಿ ತೋರಿಸಲು ಅಭ್ಯಂತರ ಇರಲಿಲ್ಲ ಎಂದರೆ ಸಾಕ್ಷಿ ನನಗೆ ಆ ಬಗ್ಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ನನ್ನ ತಂದೆ ಮತ್ತು ಪರಪ್ಪ ತಂದೆ ಸಿದ್ದಮಲ್ಲಪ್ಪ ಇವರು ಆಸ್ತಿಗಳಲ್ಲಿ ವಿಭಾಗ ಮಾಡಿಕೊಂಡ ಪ್ರಕಾರ ನಿಡಿ-1 ಮಂಜೂರಾಗಿರುತ್ತದೆ, ಸದರಿ ದಾಖಲೆಯ ದಿನಾಂಕದಿಂದ ನನ್ನ ತಂದೆ ಮತ್ತು ಪರಪ್ಪ ಹಾಗೂ ಅವರ ಸಹೋದರರರು ಪ್ರತ್ಯೇಕವಾಗಿ ವಾಸ ಮಾಡುತ್ತಾ ಬಂದಿರುತ್ತಾರೆ ಎಂದರೆ ಸಾಕ್ಷಿ ಉತ್ತರ ನೀಡಿರುವುದಿಲ್ಲ. ಅದರಂತೆ ನನ್ನ ತಂದೆಗೆ ಬಂದ ಆಸ್ತಿಗಳನ್ನು ನಾವು ಸಾಗುವಳಿ ಮಾಡುತ್ತಾ ಬಂದಿರುತ್ತೇವೆ, ಪರಪ್ಪ ಇವರಿಗೆ ಬಂದ ಆಸ್ತಿಗಳನ್ನು ಅವರೇ ಸಾಗುವಳಿ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪರಪ್ಪನೇ ಮಾಡುತ್ತಾ ಬಂದಿರುವುದಾಗಿ ಹೇಳುತ್ತಾರೆ.

ನನ್ನ ತಂದೆಯ ಆಸ್ತಿಗಳನ್ನು ಪರಪ್ಪ ಮಾರಾಟ ಮಾಡಿರುವ ಕುರಿತು, ಪರಪ್ಪ ಇವರ ಜೀವಿತ ಕಾಲದಲ್ಲಿ ಆ ಬಗ್ಗೆ ಪ್ರಶ್ನೆ ಮಾಡಿರುವುದಿಲ್ಲ. ಜಮೀನು ಸರ್ವೆ ನಂ.131/1 ಕ್ಷೇತ್ರ 14 ಎಕರೆ 24 ಗುಂಟೆ ನಾನು ಮತ್ತು ನನ್ನ ಸಹೋದರ ಗಂಗಪ್ಪ ವಾರಸಾ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ನಾನು ಮತ್ತು ನನ್ನ ಸಹೋದರ ಕೂಡಿಕೊಂಡು ಗುರುಪಾದಪ್ಪ ಸಿದ್ದಮಲ್ಲಪ್ಪ ಚಿಂಚಖಂಡಿ ಇವರಿಗೆ ರೂ.3,000/- ಗಳಿಗೆ ಮಾರಾಟ ಮಾಡಿ ದಿನಾಂಕಃ 04-12-1972 ರಂದು ಖರೀದಿ ಪತ್ರ ಹಾಕಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರದ ವಿರುದ್ಧ ನಾವು ಯಾವುದೇ ಪ್ರಶ್ನೆ ಮಾಡಿರುವುದಿಲ್ಲ. ನನ್ನ ತಂದೆಯ ಹೆಸರಿನಲ್ಲಿದ್ದ ಆಸ್ತಿಗಳನ್ನು ಮಾರಾಟ ಮಾಡಿದ ಖರೀದಿ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರಪಡಿಸಿರುವುದಿಲ್ಲ ಮತ್ತು ಆ ಬಗ್ಗೆ ಯಾವುದೇ ಪ್ರಶ್ನೆ ಮಾಡಿರುವುದಿಲ್ಲ. ನನ್ನ ತಂದೆ ಜೀವಿತ ಕಾಲದಲ್ಲಿ,ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದು, ಅದರಂತೆ ನಿಡಿ-1 ರ ಪ್ರಕಾರ ಕೆಲವು ಆಸ್ತಿಗಳು ಪರಪ್ಪ ಮತ್ತು ಅವರ ಸಹೋದರರಿಗೆ ಹೋಗಿರುತ್ತವೆ ಹಾಗೂ ನಾಲ್ಕು ಆಸ್ತಿಗಳು ನನ್ನ ತಂದೆಯ ಪಾಲಿಗೆ ಬಂದಿರುತ್ತವೆ ಎಂದರೆ ಸರಿಯಲ್ಲ. ನನ್ನ ತಂದೆ ಜಾಣ ಇರುವುದರಿಂದ ಪರಪ್ಪ ಮತ್ತು ಅವರ ಸಹೋದರರಿಗಿಂತ 5 ಎಕರೆ ಜಮೀನು ಕಡಿಮೆ ತೆಗೆದುಕೊಂಡಿದ್ದ ಎಂದರೆ ಸರಿಯಲ್ಲ. 1964 ರಲ್ಲಿ ಕೆನಾಲ ಬಂದಿರುವುದರಿಂದ, ಸದರಿ 5 ಎಕರೆ ಜಮೀನು ಪರಪ್ಪ

ಮತ್ತು ಅವರ ಸಹೋದರರಿಗೆ ಹೆಚ್ಚಿಗೆ ಕೊಟ್ಟಿದ್ದ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದು ನಮ್ಮ ಮಧ್ಯೆ ಜಂಟಿಯಾಗಿತ್ತು ಎಂದು ಹೇಳುತ್ತಾರೆ. ಸದರಿ ಆಸ್ತಿಯ ಜಮೀನು ಸರ್ವೆ ನಂ.103/2, ನನ್ನ ತಂದೆ ಮತ್ತು ಪರಪ್ಪ ಇವರ ಹೆಸರಿನಲ್ಲಿ ಜಂಟಿಯಾಗಿತ್ತು. ಒಬ್ಬ ಶಿವಾನಂದ ಪರಪ್ಪ ಇವರ ಮಗ ಎಂದರೆ ಸರಿ. ಸದರಿ ಶಿವಾನಂದ ಇವರ ಹೆಸರಿನಲ್ಲಿ ಜಮೀನು ಸರ್ವೆ ನಂ.103/2 ಕ್ಷೇತ್ರ 6 ಎಕರೆ 20 ಗುಂಟೆ ಪಹಣಿ ಪತ್ರಿಕೆಯಲ್ಲಿ ಇವತ್ತಿನವರೆಗೆ ಇದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಮೋಸ ಮಾಡಿ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಮೋಸ ಮಾಡಿ ಡೈರಿ ಮಂಜೂರು ಮಾಡಿಕೊಂಡಿರುತ್ತಾರೆ ಎಂದು ಹೇಳಿದ ಡೈರಿಯ ವಿರುದ್ಧ ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಮೋಸ ಮಾಡಿ ಡೈರಿ ಮಂಜೂರು ಮಾಡಿಕೊಂಡಿರುವ ವಿಷಯ ನನ್ನ ವಾದ ಪತ್ರ ಮತ್ತು ಸಾಕ್ಷಿಯಲ್ಲಿ ಹೇಳಿರುತ್ತೇನೆ. ಸರ್ವೆ ನಂ.103/2 ಕ್ಷೇತ್ರ 6 ಎಕರೆ 20 ಗುಂಟೆ ಪೈಕಿ ಕ್ಷೇತ್ರ 4 ಎಕರೆ 34 ಗುಂಟೆ ನೀರಾವರಿ ಇಲಾಖೆಯವರು ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಆ ಬಗ್ಗೆ ನನ್ನ ವಾದ ಪತ್ರ ಮತ್ತು ಸಾಕ್ಷಿಯಲ್ಲಿ ಹೇಳಿರುತ್ತೇನೆ. ನೀರಾವರಿ ಇಲಾಖೆಯವರು ಸದರಿ 4 ಎಕರೆ 34 ಗುಂಟೆ ಜಮೀನು ವಶಪಡಿಸಿಕೊಂಡ ನಂತರ ನಮಗೆ ಮತ್ತು 1 ರಿಂದ 8 ನೇ ಪ್ರತಿವಾದಿಯರಿಗೆ ಆಸ್ತಿಗಳು ಸಮಾನವಾಗಿ ಉಳಿದಿರುತ್ತವೆ ಎಂದರೆ ಸರಿ.

ನಾನು 1948 ರಲ್ಲಿ ಜನಿಸಿರುತ್ತೇನೆ. ನಾನು ಹುಟ್ಟಿದಾಗಿನಿಂದಲೂ ನನ್ನ ತಂದೆಯ ಹೆಸರಿನಲ್ಲಿರು ಪಡಿತರ ಚೀಟಿಯಲ್ಲಿ ನನ್ನ ಹೆಸರು ಇತ್ತು ಎಂದರೆ ಸರಿ. ಸದರಿ ಪಡಿತರ ಚೀಟಿ ನನ್ನ ತಂದೆ ಮೃತಪಡುವವರೆಗೆ ಚಾಲ್ತಿಯಲ್ಲಿತ್ತು ಎಂದರೆ ಸರಿ. ನನ್ನ ತಂದೆ ಮೃತಪಟ್ಟ ನಂತರ ನಾನು ಮತ್ತು ನನ್ನ ಕುಟುಂಬದವರ ಹೆಸರಿನಲ್ಲಿ ಹಾಗೂ ನನ್ನ ಸಹೋದರ ಗಂಗಪ್ಪ ಅವರ ಕುಟುಂಬದ ಸದಸ್ಯರ ಹೆಸರಿನಲ್ಲಿ ಪ್ರತ್ಯೇಕವಾಗಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ನನ್ನ ತಂದೆಯ ಪಡಿತರ ಚೀಟಿಯಲ್ಲಿ, 1 ರಿಂದ 8 ನೇ ಪ್ರತಿವಾದಿಯರ ಹಾಗೂ ಅವರ ಪೂರ್ವಜರ ಹೆಸರು ಇರಲಿಲ್ಲ ಎಂದರೆ ಸರಿ. ಸಿದ್ದಮಲ್ಲಪ್ಪ ಮತ್ತು ಅವರ ಮಕ್ಕಳ ಪಡಿತರ ಚೀಟಿ ಪ್ರತ್ಯೇಕವಾಗಿ ಇತ್ತು ಎಂದರೆ ಸರಿ. ಸದರಿ ಸಿದ್ದಮಲ್ಲಪ್ಪ ಹಾಗೂ ಅವರ ಕುಟುಂಬದ ಸದಸ್ಯರು ಪ್ರತ್ಯೇಕವಾಗಿ ಅಡುಗೆ ಮಾಡುತ್ತಿದ್ದರು ಹಾಗೂ ನನ್ನ ತಂದೆ ಮತ್ತು ನಾವು ಪ್ರತ್ಯೇಕವಾಗಿ ಅಡುಗೆ ಮಾಡುತ್ತಾ ವಾಸ ಇದ್ದೇವು ಎಂದರೆ ಸರಿ. 1959 ರಿಂದ ಪ್ರತ್ಯೇಕವಾಗಿ ಅಡುಗೆ ಮಾಡುತ್ತಾ ವಾಸ ಇರುತ್ತೇವೆ ಎಂದರೆ ಸರಿ. 1959 ರಿಂದ ಇಲ್ಲಿಯವರೆಗೆ ಸಿದ್ದಮಲ್ಲಪ್ಪ ಮತ್ತು ನನ್ನ

ತಂದೆ ಚನ್ನಮಲ್ಲಪ್ಪ ಹಾಗೂ ನಾವು ಒಟ್ಟು ಕುಟುಂಬದ ಸದಸ್ಯರಾಗಿ ಉಳಿದಿರುವುದಿಲ್ಲ ಎಂದರೆ ಸರಿ.

ಈ ಹಂತದಲ್ಲಿ ಸದರಿ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ASHAPPA Digitally signed by ASHAPPA Date: 2025.07.15 16:20:00 +0530

ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾದಂ.ಗಳು, ಬನಹಟ್ಟಿ